23 E
1325

ಮೈಸೂರ ಗೆಜಿಟ್ಟಿಂ.

ಸಂ. 39.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 34.

ಬೆಂಗಳೂರು, ಗುರುವಾರ, ಆಗಸ್ಟು ತಾ|| 25, ಸ|| 1904.

IIನೆ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ಗಳು ಮೈಸೂರಿಂದ ಕೊಡೋಪಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಚೀಫ್ ಕೋರ್ಟ್‌ನಲ್ಲಿ.

ಕ್ರಿಮಿನಲ್ ತರಫ್.

ಸ|| 1904ನೆ ಇಸವಿ ಆಗಸ್ಟು 5ನೆ ತಾರೀಖಿನ ರೂಲ್ ಆಫ್ ಪ್ರಾಕ್ಟೀಸ್ ನಂಬರು 73.

ಕ್ರಿ. ಪ್ರೊ. ಕೋ. 553ನೆ ಸೆಕ್ಷನ್ ರೀತ್ಯಾ ಚೀಫ್ ಕೋರ್ಟ್‌ನವರು, ಗವರ್ನ್‌ಮೆಂಟ್‌ನವರ ಒಪ್ಪಿಕೆಯಿಂದ ಈ ಕೆಳಗೆ ನಮೂದಿಸಿರುವ ರೂಲ್ ಅನ್ನು ವಿಧಿಸಿದ್ದಾರೆ:—

ಒಬ್ಬ ಪ್ರೈವೇಟ್ ಆಸಾಮಿಯು (Private person,) ಸಿವಲ್ ಅ ಕ್ರಿಮಿನಲ್ ಪ್ರೊಸೀಡಿಂಗ್ಸು ಅಥವಾ ಇನ್ಯಾವ ವಿಷಯ ಕ್ಕಾಗಲೀ, ಗವರ್ನ್‌ಮೆಂಟು, ಮ್ಯುನಿಸಿಪಲ್ ಅಥವಾ ಲೋಕಲ್ ಫಂಡು ಸರ್ವಿಸ್ಸಿನಲ್ಲಿರುವ ಒಬ್ಬ ಮೆಡಿಕಲ್ ಆಫಿಸರಿಂದ ಸರ್ಟಿಫಿಕೇಟ್, ಅಥವಾ ಅವರ ಅಭಿಪ್ರಾಯ ಅಥವಾ ಸಾಕ್ಷ್ಯತ್ವವನ್ನು ಕೊಡಬೇಕೆಂದು ಅಪೇಕ್ಷಿಸಿದ ಪಕ್ಷದಲ್ಲಿ, ಸದರೀ ಮೆಡಿಕಲ್ ಆಫಿಸರಿಗೆ ಅವರ ಆಲೋವೆನಸ್ಸು ವಿನಹಾ ಅವರಿಗೆ ಸಲ್ಲುವ ಎರಡು ದಿವಸಗಳ ತಲುಬಿಗೆ ಹೆಚ್ಚ್‌ದಂತೆ ಮತ್ತು 5 ರೂಪಾಯಿಗಳಿಗೆ ವಿೂರದೆ ಫೀಜು ಕೊಡ ಬೇಕೆಂತಲೂ ಮತ್ತು ಸದರಿ ಆಸಾಮಿಯು ಸರ್ಕಾರಿ ಅಥವಾ ಮ್ಯುನಿಸಿಪಲ್ ಅಥವಾ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ಇಲಾಜು ಹೊಂದಿದ ಮಾತ್ರದಿಂದಲೆ ಮೇಲ್ಕಂಡ ಕುಸುಂಬಿಂದ ವಿನಾಯತಿ ಹೊಂದಲು ಅರ್ಹನಲ್ಲವೆಂತಲೂ, ಗವರ್ನ್‌ಮೆಂಟಿನವರು ಸ|| 1904ನೆ ಫೆಬ್ರವರಿ 11ನೆ ನಂಬ್ರದ ನೋಟಿಫಿಕೇಷನ್ 3989—4038ನೆ. ಪ್ರೊಸೀಡಿಂಗ್ಸನ್ನು ಮಾಡಿರುತ್ತಾರಾಗಿ, ಒಬ್ಬ ಪ್ರೈವೇಟ್ ಆಸಾಮಿಯ ಅಪೇಕ್ಷೆ ಮೇಲೆ, ಕ್ರಿಮಿನಲ್ ಕೋರ್ಟ್‌ನವರು ಒಬ್ಬ ಮೆಡಿಕಲ್ ಆಫಿಸರ ಸರ್ಟಿಫಿಕೇಟ್ ಅಥವಾ ಅಭಿಪ್ರಾಯವನ್ನು ಅಪೇಕ್ಷಿಸಿದಾಗ ಅಥವಾ ಸಾಕ್ಷ್ಯತ್ವವನ್ನು ಕೊಡುವದಕ್ಕೆ ಅವರನ್ನು ಸಮ್ಮನ್ ಮೂಲಕ ಕರೆದಾಗ, ಅಂಥಾ ಆಸಾಮಿಯು, ತಕ್ಕ್ಯೂರ್ವದಲ್ಲಿಯೇ ಅವಶ್ಯಕವಾದ ಫೀಜನ್ನು ನಗದು ಡಿಪಾಜಿಟ್ ಇಡುವಹಾಗೆ ಹುಕುಂ ಮಾಡುವುದಕ್ಕೆಂತಲೂ ಮತ್ತು ಈ ಪೊಬಲಗನ್ನು ಮೆಡಿಕಲ್ ಆಫಿಸರಿಗೆ, ಅವರು ಸರ್ಟಿಫಿಕೇಟ್, ಅಭಿಪ್ರಾಯ ಅಥವಾ ಸಾಕ್ಷ್ಯವನ್ನು ಕೊಟ್ಟನಂತರ, ಪಾವತಿ ಮಾಡುವಹಾಗೆ ಹುಕುಂ ಮಾಡಬೇಕೆಂತಲೂ, ಚೀಫ್ ಕೋರ್ಟ್‌ನವರು ಆಜ್ಞಾಪಿಸಿದ್ದಾರೆ.

ತಮ್ಮ ವಿಧೇಯ,
ವಿ. ಎ. ರಾಜರತ್ನ ಮೊದಲಿಯಾರ್, ರಿಜಿಸ್ಟ್ರಾರ್.